# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ್, ಬಸವನ ಬಾಗೇವಾಡಿ.

ಸಿಸಿ ನಂಃ 611/2016

ಸಿ.ಡಬ್ಲ್ಯೂ: 10 ಪಿ.ಡಬ್ಲ್ಯೂ: 5

| | | |
|---|---|---|
| ಸಾಕ್ಷಿದಾರರ ಹೆಸರು | ಡಾ. ಕಿರಣ ಪಾಟೀಲ | |
| ತಂದೆ/ಗಂಡನ ಹೆಸರು | ಸಂಗನಗೌಡ | |
| ವಯಸ್ಸು | 52 | ವರ್ಷ |
| ಉದ್ಯೋಗ | ವೈದ್ಯಾಧಿಕಾರಿಗಳು ವೈಭವ ಆಸ್ಪತ್ರೆ | |
| ವಾಸಸ್ಥಳ | ವಿಜಯಪೂರ. | |

**ಸಾಕ್ಷಿಯನ್ನು ಇಂದು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 25.07.2026.**

## ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ

1. ನಾನು 2013 ರಿಂದ ಇಲ್ಲಿಯವರೆಗೆ ವೈಭವ ಆಸ್ಪತ್ರೆ ವಿಜಯಪೂರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ:29.03.2016 ರಂದು ಸಂಜೆ 08.00 ಗಂಟೆಗೆ ಚಾಸಾ-1 ರವರು ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಮುಂದೆ ಹಾಜರಾಗಿದ್ದು, ನಾನು ಅವರನ್ನು ಪರಿಕ್ಷಿಸಿದಾಗ,

1. ಬೆನ್ನಿಗೆ ಮತ್ತು ಎಡ ಬುಜದ ಮೇಲೆ ಒಳ ನೋವುಗಳು ಆಗಿದ್ದವು. ನಂತರ ನಾನು ಚಾಸಾ-1 ರವರಿಗೆ ಎಕ್ಸ್ ರೇ ಮಾಡಿಸುವಂತೆ ಸಲಹೆ ನೀಡಿದ್ದು, ಸದರಿ ಚಾಸಾ-1 ರವರು ಎಕ್ಸ್ ರೇಯನ್ನು ಮಾಡಿಸಿ ನನ್ನ ಮುಂದೆ ಹಾಜರುಪಡಿಸಿದ್ದು, ಸದರಿ ಎಕ್ಸ್ ರೇನ್ನು ನಾನು ಪರಿಶೀಲಿಸಲಾಗಿ ಸದರಿ ಚಾಸಾ-1 ರವರಿಗೆ ಯಾವುದೇ ಮೂಳೆ ಮುರಿತದ ಗಾಯಗಳು ಆಗಿರುವುದಿಲ್ಲ.

3. ನಾನು ಮೇಲೆ ಹೇಳಿದ ಗಾಯವು ಸಾದಾ ಸ್ವರೂಪದ ಗಾಯಗಳು ಆಗಿರುತ್ತವೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಸದರಿ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಈಗಾಗಲೇ ಅದನ್ನು ನಿಪಿ-5 ಎಂದು ಗುರುತಿಸಲಾಗಿರುತ್ತದೆ ಹಾಗೂ ಸಾಕ್ಷಿ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

4. ನಿಪಿ-5 ರಲ್ಲಿ ನಮೂದಿಸಿದ ಗಾಯಗಳು ಒಬ್ಬ ವ್ಯಕ್ತಿಗೆ ಮು.ಮಾ-1 ಮತ್ತು 2 ರಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ.

**<u>ಪಾಟೀ ಸವಾಲುಃ- ಆರೋಪಿತರ ಪರ ಶ್ರೀ.ಎ.ಜಿ.ಎನ್ .ವಕೀಲರಿಂದ:-</u>**

1. ಚಾಸಾ-1 ರವರು ಎಕ್ಸ್ ರೇ ನ್ನು ಎಲ್ಲಿ ಮಾಡಿಸಿರುತ್ತಾರೆ ಎಂಬುದು ಈಗ ನನಗೆ ನೆನಪು ಇರುವುದಿಲ್ಲ. ನಾನು ಪೋಲಿಸರಿಗೆ ಎಕ್ಸ್ ರೇ ಕಾಪಿಯನ್ನು ಕೊಟ್ಟಿಲ್ಲ ಎಂದುಸಾಕ್ಷಿಯು ಸದರಿ ಎಕ್ಸ್ ರೇ ಕಾಪಿ ನಮ್ಮ ಹತ್ತಿರ ಇರುತ್ತದೆ ಎಂದು ಹೇಳುತ್ತಾರೆ. ಚಾಸಾ-1 ರವರು ಮೊದಲು ಸರ್ಕಾರಿ ಆಸ್ಪತ್ರೆಗೆ ಹೋಗಿ ಬಂದಿರುವ ಕುರಿತು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ನಡೆಯುವಾಗ ಎಡುವಿ ಬಿದ್ದಾಗ ನಿಪಿ-5 ರಲ್ಲಿ ನಮೂದಿಸಿರುವ ಗಾಯಗಳು ಆಗಬಹುದು ಎಂದರೆ ಸರಿ. ನಿಪಿ-5 ರಲ್ಲಿ ನಮೂದಿಸಿರುವ ಗಾಯಗಳು ಒಬ್ಬ ವ್ಯಕ್ತಿಗೆ ಬಡಿಗೆಯಿಂದ ಮತ್ತು ಕಲ್ಲಿನಿಂದ ಹೊಡೆದರೆ ಆಗುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಯಾವುದೇ ಚಿಕಿತ್ಸೆಯನ್ನು ನೀಡದೇ ಇದ್ದರೂ ಕೂಡ ನಾನು ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ** ವಿಡಿಯೋ ಕಾನ್ಫರೇನ್ಸ ಮುಖಾಂತರ ಬೆಳಿಗ್ಗೆ 12.45 ರಿಂದ 1.05 ಗಂಟೆಯವರೆಗೆ **ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೆ ಕೆ ಸರಿ ಅದೆ,

1 ನೇ ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.